



ಬಾಗ್ದಾ : ಮೌಲ್ಯ ಶಿಕ್ಷಣ ಕಾರ್ಯಕ್ರಮ



ಬೇಲೂರು ಮಠ

# ರಾಮಕೃಷ್ಣ ಮಹಾಸಂಘದ ಸೆಪ್ಟೆಂಬರ್ – ಅಕ್ಟೋಬರ್ ತಿಂಗಳ ಕಾರ್ಯಚಟುವಟಿಕೆಗಳು

**ಶ್ರೀಶ್ರೀ ದುರ್ಗಾಪೂಜೆ:** ಬೇಲೂರು ಮಠದಲ್ಲಿ ಹಾಗೂ ಇತರ ಶಾಖಾ ಕೇಂದ್ರಗಳಲ್ಲಿ ೨೦೧೯ರ ದುರ್ಗಾಪೂಜೆಯ ಸಕಲ ವೈಭವಗಳೊಂದಿಗೆ, ವಿವಿಧ ಆಚರಣೆ ಹಾಗೂ ಕಾರ್ಯಕ್ರಮಗಳೊಂದಿಗೆ ಅಕ್ಟೋಬರ್ ೫ರಿಂದ ೮ರ ವರೆಗೆ ನೆರವೇರಿತು. ಬೇಲೂರು ಮಠದಲ್ಲಿ ದುರ್ಗಾಪೂಜೆಯ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಭಕ್ತರು ನೆರದಿದ್ದು, ಪೂಜೆ ಹಾಗೂ ಇತರ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ಕುಮಾರಿಪೂಜೆ, ಸಂಧಿಪೂಜೆಗಳು ೬ನೇ ದಿನಾಂಕದಂದು ನಡೆದಿದ್ದು, ಸಾವಿರಾರು ಮಂದಿ ಇವುಗಳನ್ನು ವೀಕ್ಷಿಸಿದರು. ಅಷ್ಟಮಿಯಂದು ಸುಮಾರು ೬೭೦೦೦ ಮಂದಿ ಭಕ್ತರು ಹಾಗೂ ಎಲ್ಲ ದಿನಗಳಲ್ಲಿ ಒಟ್ಟಾಗಿ ಸುಮಾರು ಒಂದೂವರೆ ಲಕ್ಷ ಭಕ್ತರು ಪ್ರಸಾದ ಭೋಜನ ಸ್ವೀಕರಿಸಿದರು. ಇದಲ್ಲದೆ ಆಂಟ್‌ಪುರ, ಅಸನ್ಸೋಲ್, ಬಾರಾಸಾತ್, ಬಿಲಾಸ್‌ಪುರ, ಕೊಂಟೈ , ಕೂಚ್‌ಬಿಹಾರ್, ಧಾಲೇಶ್ವರ (ಅಗರ್ತಲ), ಘಾಟ್‌ಶಿಲಾ, ಗುವಾಹಟಿ, ಗ್ವಾಲಿಯರ್, ಜಲಪ್ಯಾಗುಡಿ, ಜೆಮಶೆಡ್‌ಪುರ, ಜಯರಾಮಬಾಟಿ, ಕೈಲಾಸಶಹರ್, ಕಾಮಾರಪುಕುರ, ಕರೀಂಗಂಜ್, ಕಸುಂಡಿಯಾ, ಲಕ್ನೋ, ಮಾಲ್ಡಾ, ಮೇದಿನೀಪುರ, ಮುಂಬಯಿ, ಪಾಟ್ನಾ, ಪೋರ್ಟ್ ಬ್ಲೇರ್, ರಹರಾ, ಶೆಲ್ಲಾ (ಸೊಹರ – ಚಿರಾಪುಂಜಿ), ಶಿಲ್ಲಾಂಗ್, ಸಿಲ್‌ಚಾರ್, ವಾರಣಾಸಿ ಅದ್ವೈತ ಆಶ್ರಮ ಹಾಗೂ ಶ್ಯಾಮಸಾಯೇರ್ ಈ ಕೇಂದ್ರಗಳಲ್ಲಿ ಮೂರ್ತಿಯನ್ನಿಟ್ಟು ದುರ್ಗಾಪೂಜೆಯನ್ನು ಮಾಡಲಾಯಿತು.



ಬೆಳಗಾವಿ : ಯುವ ಸಮ್ಮೇಳನ

**ಹೊಸ ಶಾಖಾಕೇಂದ್ರ :** ಇಲ್ಲಿಯವರೆಗೆ ಬೇಲೂರು ಮಠ ಪ್ರಧಾನ ಕೇಂದ್ರದ ಆಡಳಿತದಲ್ಲಿದ್ದು ಉಪ ಶಾಖಾಕೇಂದ್ರವಾಗಿದ್ದ ವರ್ಧಮಾನದಲ್ಲಿರುವ **ಶ್ಯಾಮಸಾಯೇರ್** ರಾಮಕೃಷ್ಣ ಮಿಷನ್ ಈಗ ಪೂರ್ಣಪ್ರಮಾಣದ ಕೇಂದ್ರವಾಗಿ ಪರಿವರ್ತಿತವಾಗಿದೆ.

**ಚಿಕಾಗೋ ಉಪನ್ಯಾಸಗಳ ೧೨೬ನೇ ವಾರ್ಷಿಕೋತ್ಸವದ ಆಚರಣೆ :** ಸ್ವಾಮಿ ವಿವೇಕಾನಂದರು ಚಿಕಾಗೋದಲ್ಲಿ ನೀಡಿದ ವಿಶ್ವವಿಖ್ಯಾತ ಉಪನ್ಯಾಸಗಳ ೧೨೬ನೇ ವಾರ್ಷಿಕೋತ್ಸವದ ಆಚರಣೆಯ ಅಂಗವಾಗಿ ಈ ಕೆಳಗಿನ ಶಾಖಾಕೇಂದ್ರಗಳು ಹಲವು ಕಾರ್ಯಕ್ರಮಗಳನ್ನು ನೆರವೇರಿಸಿದವು. **ಭಾರತದಲ್ಲಿ:** ಆಲ್ಮೋರ, ಬೆಳಗಾವಿ, ಚಂಡೀಪುರ್, ಕೊಯಮತ್ತೂರು ಮಿಷನ್ ವಿದ್ಯಾಲಯ, ಜೆಮ್‌ಶೆಡ್‌ಪುರ, ಮಾಲ್ಡಾ, ನೌರಾ, ಪೊನ್ನಂಪೇಟೆ, ರಾಜ್‌ಕೋಟ್, ಸೇಲಂ, ಸರಿಶ, ಸಿಲ್‌ಚಾರ್, ವಾರಣಾಸಿ ಸೇವಾಶ್ರಮ — ಈ ಕೇಂದ್ರಗಳಲ್ಲಿ ವಿಚಾರ ಸಂಕಿರಣ, ಯುವ ಸಮ್ಮೇಳನ, ಸಾಂಸ್ಕೃತಿಕ ಸ್ಪರ್ಧೆ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳೊಂದಿಗೆ ವಾರ್ಷಿ ಕೋತ್ಸವವನ್ನು ಆಚರಿಸಲಾಯಿತು.

**ಮೌಲ್ಯ ಶಿಕ್ಷಣ ಕಾರ್ಯಕ್ರಮ ಹಾಗೂ ಯುವ ಸಮ್ಮೇಳನಗಳು :** ಬಾಗ್ದಾ, ದಾವಣಗೆರೆ, ದೆಹಲಿ ಗದಾಧರ ಆಶ್ರಮ ಹಾಗೂ ಮದುರೈ ಕೇಂದ್ರಗಳು ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ವಿವಿಧ ಮೌಲ್ಯಶಿಕ್ಷಣ ಹಾಗೂ ಯುವ ಸಮ್ಮೇಳನಗಳನ್ನು ನಡೆಸಿದವು.

**ವಿದೇಶಗಳಲ್ಲಿ:** ಬಾಂಗ್ಲಾದೇಶದ ೧೪ ಕೇಂದ್ರಗಳಲ್ಲಿ, ದಕ್ಷಿಣ ಆಫ್ರಿಕಾದ ಡರ್ಬನ್, ಝಾಂಬಿಯಾದ ಲುಸಾಕ, ಮೊರಿಷಿಯಸ್ ಕೇಂದ್ರಗಳಲ್ಲಿ ದುರ್ಗಾಪೂಜೆಯನ್ನು ಮೂರ್ತಿಯನ್ನಿಟ್ಟು ಆಚರಿಸಲಾಯಿತು. ಫಿಜಿ ಆಶ್ರಮದ ಸ್ವಾಮಿ ವಿವೇಕಾನಂದ ಕಾಲೇಜು ತನ್ನ ಅಮೃತ ಮಹೋತ್ಸವವನ್ನು ಸೆಪ್ಟೆಂಬರ್ ೧೦ ರಿಂದ ೧೩ರ ವರೆಗೆ ನಡೆಸಿತು.

ಸಿಲ್‌ಚಾರ್ : ಯುವ ಸಮ್ಮೇಳನ








Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020